# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

(10)

ಸಂ: ಕಂದಾಯ/ಅಪೀಲು/196/15-16

ದಿನಾಂಕ :20 / 5 / 2016

ಉಪಸ್ಥಿತರು: **ಶ್ರೀಮತಿ ಕೆ. ಅನ್ನಪೂರ್ಣ** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಲಕ್ಷ್ಮೀ @ ಮಲ್ಲಮ್ಮ ಗಂಡ ಶರಣಪ್ಪ<br>ಜಾನೆಕುಂಟೆ ಗ್ರಾಮ ಬಳ್ಳಾರಿ ತಾಲೂಕು<br><br>**(ಶ್ರೀ ಜಿ.ನೀಲನಗೌಡ ವಕೀಲರು ಬಳ್ಳಾರಿ)** | 1)ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಬಳ್ಳಾರಿ<br>3)ಶ್ರೀ ಬಸವರಾಜ ತಂದೆ ಲೇಟ್ ವಿರುಪಾಕ್ಷಪ್ಪ<br>4)ಶ್ರೀ ಶರಣಪ್ಪ ತಂದೆ ಲೇಟ್ ವಿರುಪಾಕ್ಷಪ್ಪ<br>5) ಶ್ರೀಮತಿ ಶರಣಮ್ಮ ಗಂಡ ಲೇಟ್ ವಿರುಪಾಕ್ಷಪ್ಪ<br>ಜಾನೆಕುಂಟೆ ಗ್ರಾಮ ಬಳ್ಳಾರಿ ತಾಲೂಕು<br>6) ವಿಶೇಷ ಭೂ ಸ್ವಾಧಿನಾಧಿಕಾರಿಗಳು ಕೆ.ಐ.ಎ.ಡಿ.ಬಿ ದಾವಣಗೇರೆ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಬಳ್ಳಾರಿ | ಜಾನೆಕುಂಟೆ | 212/ಬಿ ಪೈಕಿ | 2.00 ಮತ್ತು 3.14 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 25/98-99 ದಿನಾಂಕ 05-02-1999 ಆದೇಶದ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸ್ ನೀಡಿ ದಿನಾಂಕ 20/05/2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಯಿತು.

ಆದರೆ ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಇತ್ಯರ್ಥ ಪಡಿಸಿಕೊಂಡಿರುವುದಾಗಿ ತಿಳಿಸಿ, ಮೇಲ್ಮನವಿಯನ್ನು ಹಿಂಪಡೆಯಲು ಕೋರಿ ಮೇಲ್ಮನವಿದಾರರ ಪರ ವಕೀಲರು ಈ ನ್ಯಾಯಾಲಯಕ್ಕೆ ಮೆಮೊ (NOT PRESS MEMO) ನ್ನು ಸಲ್ಲಿಸಿರುತ್ತಾರೆ.

ಕಾರಣ ಸದರಿ ಪ್ರಕರಣವನ್ನು ಮುಂದುವರೆಸಲು ಆಸಕ್ತಿ ಇಲ್ಲವೆಂದು ತಿಳಿಸಿ ವಾದಿಪರ ವಕೀಲರು ಮೆಮೋ (NOT PRESS MEMO) ಸಲ್ಲಿಸಿರುವ ಮೇರೆಗೆ ಹಾಗೂ ಮುಕ್ತಾಯಗೊಳಿಸಲು ಕೋರಿ ಸಹಿ ಮಾಡಿ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ವಾದಿಗಳ ಪರವಕೀಲರು Not press memo ಸಲ್ಲಿಸಿರುತ್ತಾರೆ ಪ್ರಯುಕ್ತ, ಈ ಕೆಳಕಂಡ ಆದೇಶ.

**:: ಆದೇಶ ::**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಜಾನೆಕುಂಟೆ ಗ್ರಾಮದ ಸ. ನಂ. 212/ಬಿ ಪೈಕಿ ವಿಸ್ತೀರ್ಣ: 2.00 ಮತ್ತು 3.14 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಲಾಗಿದೆ.

ಈ ಆದೇಶವನ್ನು **ದಿನಾಂಕ** 20/ 05/ **2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು
ಬಳ್ಳಾರಿ

ಸಹಾಯಕ ಆಯುಕ್ತರು
ಬಳ್ಳಾರಿ.

30/5/16